B.7 Curriculum Development Process

- Identification of Employable Skills set in a sector based on division of work in the labour market in consultation with Industry
- Development of training modules corresponding to skills set identified
- Organising Modules in to Course Matrix indicating vertical and horizontal mobility .
- Development of detailed curriculum
- Vetting by a trade committee comprising representatives of Industry, training providers & trade experts
- Inviting comments from Employers/ Employees Organisations, State Govts. Etc.
- Approval by the NCVT

B.8 Instructional Media Packages

In order to maintain quality of training uniformly all over the country, instructional media packages (IMPs) will be developed by the National Instructional Media Institute (NIMI), Chennai.

ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ನಿರ್ಮಾಣ ಮಾಡುವುದು

895 (1144) ಶ್ರೀ ಮಂಜು ಎ (ಅರಕಲಗೂಡು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಎಷ್ಟು ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ನಿರ್ಮಾಣ ಮಾಡಲಾಗಿದೆ;

ಆ) ಈ ಶಾಲೆಗಳ ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ ಎಷ್ಟು ಹಣವನ್ನು ಒದಗಿಸಲಾಗಿದೆ?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) 2001 ರಿಂದ ಈವರೆಗೆ 100 ನಿರ್ಮಾಣ ಮಾಡಲಾಗಿದೆ.

ಆ) ರೂ. 12.87 ಕೋಟಿಗಳು ಬಂದಿದೆ.

ಎನ್.ಆರ್.ಹೆಚ್.ಎಂ. ಯೋಜನೆಯಡಿ ಆರೋಗ್ಯ ಕವಚ ಆಂಬ್ಯುಲೆನ್ಸ್‌ಗಳ ಸೇವೆಗಾಗಿ ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನ

896 (1145) ಶ್ರೀ ಮಂಜು ಎ (ಅರಕಲಗೂಡು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದಿಂದ ಎನ್.ಆರ್.ಹೆಚ್.ಎಂ. ಯೋಜನೆಯಡಿ ಆರೋಗ್ಯ ಕವಚ ಆಂಬ್ಯುಲೆನ್ಸ್‌ಗಳ ಸೇವೆಗಾಗಿ ಬಂದಿರುವ ಅನುದಾನ ಮೊತ್ತವೆಷ್ಟು?

ಆ) ಈ ಯೋಜನೆಗೆ ರಾಜ್ಯ ಸರ್ಕಾರವು ತನ್ನ ಪಾಲಿನ ಎಷ್ಟು ಹಣ ನೀಡಿದೆ;

ಇ) 2009–10ನೇ ಸಾಲಿನಲ್ಲಿ ಈ ಯೋಜನೆಗೆ ಎಷ್ಟು ಹಣ ವೆಚ್ಚ ಮಾಡಲಾಗಿದೆ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆಯಡಿ ಇದುವರೆಗೆ ಆರೋಗ್ಯ ಕವಚ ಯೋಜನೆಗೆ ರೂ. 6.25 ಕೋಟಿಗಳು (ಫೆಬ್ರವರಿ 2010 ರ ಅಂತ್ಯದವರೆಗೆ) ಬಿಡುಗಡೆ ಮಾಡಲಾಗಿದೆ.

ಆ) ರಾಜ್ಯ ಸರ್ಕಾರದ ಆಯವ್ಯಯದಿಂದ ಇದುವರೆಗೆ ಈ ಯೋಜನೆಗಾಗಿ (ಫೆಬ್ರವರಿ 2010ರ ಅಂತ್ಯದವರೆಗೆ) ಒಟ್ಟು ರೂ. 20 ಕೋಟಿಗಳು ಹಾಗೂ 12 ನೇ ಹಣಕಾಸು ಆಯೋಗದಿಂದ ಹಂಚಿಕೆಯಾದ ರಾಜ್ಯದ ಪಾಲು ರೂ. 86.25 ಕೋಟಿಗಳು ಸೇರಿದಂತೆ ಒಟ್ಟು ರೂ. 106.25 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) 2009–10 ನೇ ಸಾಲಿನಲ್ಲಿ ಈ ಯೋಜನೆಗೆ ಎನ್.ಆರ್.ಹೆಚ್.ಎಂ. ವತಿಯಿಂದ ರೂ. 5 ಕೋಟಿಗಳು ರಾಜ್ಯ ಸರ್ಕಾರದ ಆಯವ್ಯಯದಿಂದ ರೂ. 10 ಕೋಟಿಗಳು ಹಾಗೂ 12ನೇ ಹಣಕಾಸು